# ಕರ್ನಾಟಕ ಸರ್ಕಾರ

ಸಂ.ಗ್ರಾಅಪ/29/ಎಸ್.ಜೆ.ವೈ.-2011 (ಎ-8)

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ: 27.08.2013.

ಇವರಿಂದ,
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಇವರಿಗೆ,

4. ರಾಜ್ಯದ ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳು ಹಾಗೂ ಪ್ರಧಾನ ಎಸ್ಇಸಿಸಿ-2011 ಅಧಿಕಾರಿಗಳು.
5. ಆಯುಕ್ತರು ಹಾಗೂ ಪ್ರಧಾನ ಎಸ್ಇಸಿಸಿ-2011 ಅಧಿಕಾರಿಗಳು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಕೇಂದ್ರ ಕಛೇರಿ, ಹಡ್ಸನ್ ವೃತ್ತ, ಬೆಂಗಳೂರು.
6. ಆಯುಕ್ತರು ಹಾಗೂ ಪ್ರಧಾನ ಎಸ್ಇಸಿಸಿ-2011 ಅಧಿಕಾರಿಗಳು, ಮಹಾನಗರ ಪಾಲಿಕೆ: ಮೈಸೂರು, ಮಂಗಳೂರು, ಬೆಳಗಾಂ, ಹುಬ್ಬಳ್ಳಿ-ಧಾರವಾಡ, ಗುಲ್ಬರ್ಗ, ಬಳ್ಳಾರಿ ಮತ್ತು ದಾವಣಗೆರೆ.

ಮಾನ್ಯರೆ,

ವಿಷಯ: ಸಾಮಾಜಿಕ, ಆರ್ಥಿಕ ಮತ್ತು ಜಾತಿಗಣತಿ-2011.(ಎಸ್ಇಸಿಸಿ-2011) ಕರಡು ಪಟ್ಟಿ ಪ್ರಕಟಿಸಲು ಸಿದ್ಧತೆ ಮಾಡಿಕೊಳ್ಳುವ ಕುರಿತು.

ಉಲ್ಲೇಖ: ದಿನಾಂಕ 13.07.2013ರಂದು ಜರುಗಿದ ವಿಡಿಯೋ ಕನ್ಫರೆನ್ಸ್
ದಿನಾಂಕ 13.08.2013ರಂದು ಜರುಗಿದ ಅಧಿಕಾರಯುಕ್ತ ಸಮಿತಿಸಭೆಯ ನಡವಳಿಗಳು.

-: 0 :-

ಸಾಮಾಜಿಕ, ಆರ್ಥಿಕ ಮತ್ತು ಜಾತಿಗಣತಿ-2011(ಎಸ್ಇಸಿಸಿ-2011)ರ ಗಣತಿ ಕಾರ್ಯವು ವಿವಿಧ ಹಂತಗಳಲ್ಲಿ ಪ್ರಗತಿಯಲ್ಲಿದ್ದು, ಪ್ರಸ್ತುತ ರಾಜ್ಯದಲ್ಲಿ ಪರಿಶೀಲನೆ ಮತ್ತು ತಿದ್ದುಪಡಿ ಕಾರ್ಯವು ಶೇ90ರಷ್ಟು ಪೂರ್ಣಗೊಂಡಿದ್ದು ಅನೇಕ ಜಿಲ್ಲೆಗಳಲ್ಲಿ ಶೇ100 ರಷ್ಟು ಪೂರ್ಣಗೊಂಡಿರುತ್ತದೆ.

ದಿನಾಂಕ 13.07.2013ರಂದು ಸರ್ಕಾರದ ಮುಖ್ಯಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ಜರುಗಿದ ಅಧಿಕಾರಯುಕ್ತ ಸಮಿತಿಸಭೆಯಲ್ಲಿ, ದಿನಾಂಕ 30.09.2013ರಂದು ಕರಡು ಪಟ್ಟಿ ಪ್ರಕಟಿಸಲು ತಿರ್ಮಾನಿಸಿ ವೇಳಾಪಟ್ಟಿ ಹೊರಡಿಸಲಾಗಿದೆ. ಆದುದ್ದರಿಂದ ಸಾಮಾಜಿಕ, ಆರ್ಥಿಕ ಮತ್ತು ಜಾತಿಗಣತಿ-2011(ಎಸ್ಇಸಿಸಿ-2011)ರ ಬಾಕಿ ಉಳಿದಿರುವ ಕೆಲಸಗಳಾದ Jurisdictional Discrepancy, Duplicate Data, ಕೈಬಿಟ್ಟುಹೋಗಿರುವ ಕುಟುಂಬಗಳ ಗಣತಿ ಹಾಗೂ ವಸತಿ ರಹಿತ ಕುಟುಂಬಗಳನ್ನು ಗಣತಿಯನ್ನು ಪೂರ್ಣಗೊಳಿಸುವುದು ಅಗತ್ಯವಾಗಿರುತ್ತದೆ.